

## ಪಾದರಸ?

ಮೇ ತಿಂಗಳ ಸುಡುಬಿಸಿಲು. ಉತ್ತರ ಭಾರತದ ಪ್ರವಾಸ ಕೈಗೊಂಡಿದ್ದ ನಾವು ಜಲಂದರ್‌ನಲ್ಲಿ ತ್ರಿಪುರಮಾಲಿನಿ ಕಾತ್ಯಾಯಿನಿ ದೇವಸ್ಥಾನಕ್ಕೆ ಭೇಟಿ ನೀಡಿದ್ದೆವು. ದೇವಸ್ಥಾನದ ಪ್ರಾಂಗಣ ಬಹಳ ದೊಡ್ಡದಾಗಿದ್ದು ಬರಿಗಾಲಿನಲ್ಲಿ ನಡೆಯುವುದು ಬೆಂಕಿಯ ಮೇಲೆ ಕಾಲಿಟ್ಟಂತೆ ಆಗಿತ್ತು. ನನ್ನ ಪತ್ನಿಯ ಭಾವ ವೆಂಕಟೇಶ್ ಸರಸರನೆ ನಡೆಯುತ್ತಿದ್ದುದನ್ನು ನೋಡಿ ನಮ್ಮ ಮಗಳ ಮಾವನವರು, 'ವೆಂಕಟೇಶ ಮೂರ್ತಿಗಳು ಪಾದರಸದಂತೆ ಬಹಳ ಚುರುಕು. ಎಷ್ಟು ಬೇಗ ಬೇಗ ನಡೀತಿದಾರೆ ನೋಡಿ!' ಎಂದರು. ಆಗ ನನ್ನ ಪತ್ನಿಯ ಅಣ್ಣ ಸತ್ಯಾನಾರಾಯಣ, 'ಈ ಹನ್ನೆರಡು ಗಂಟೆ ಏರು ಬಿಸಿಲಿನಲ್ಲಿ ನೆಲ ಕಾದ ಹಂಚಾಗಿದೆ. ಆದ್ದರಿಂದ ಅವರು 'ಪಾದ ರಸ' ಆಗಿದ್ದಾರೆ ಅಷ್ಟೆ. ಇಲ್ಲಾಂದ್ರೆ ಅವರು ನಿಧಾನವಾಗೇ ನಡೆಯೋದು' ಎಂದಾಗ ಅವರ ಹಾಸ್ಯ ಚಟಾಕಿಗೆ ನಮ್ಮೊಂದಿಗೆ ಸಹಪ್ರಯಾಣಿಕರೂ ಜೋರಾಗಿ ನಗಲಾರಂಭಿಸಿದರು!

**ಬಿ.ಕೆ. ನರಸಿಂಹಮೂರ್ತಿ, ಬೆಂಗಳೂರು**

## ತಾಯಿತಂದೆ

ನಾನಾಗ ಸಕಲೇಶಪುರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದೆ. ಒಮ್ಮೆ ಕಾಲೇಜಿನ ಜವಾನ ಮಹಮ್ಮದ್ ಗೌಸ್ ಪ್ರಾಂಶುಪಾಲರ ಬಳಿ ಬಂದು, 'ಸಾರ್, ನಾನು 'ತಾಯಿತಂದೆ' ನೋಡಬೇಕು, ಒಂದು ದಿನ ರಜೆ ಕೊಡಿ' ಎಂದು ಕೇಳಿಕೊಂಡ. ಪ್ರಾಂಶುಪಾಲರು ಗೌಸ್‌ನನ್ನೇ ನೋಡುತ್ತಾ, ಪಾಪ, ದೂರದ ಊರಿನಿಂದ ಬಂದು ಇಲ್ಲೇ ವಾಸವಿದ್ದಾನೆ. ಊರಿಗೆ ಹೋಗಿ ಬರಲಿ ಎಂದುಕೊಂಡು, 'ಆಯಿತು, ರಜೆ ಅರ್ಜಿ ತೆಗೆದುಕೊಂಡು ಹೋಗಿ ಬಾ' ಎಂದು ಅನುಮತಿ ನೀಡಿದರು. ಒಂದು ದಿನದ ಬಳಿಕ ಕಾಲೇಜಿಗೆ ಬಂದ ಗೌಸ್‌ನನ್ನು ನೋಡಿ, 'ಏನೋ ನಿನ್ನ 'ತಂದೆತಾಯಿ ಚೆನ್ನಾಗಿದ್ದಾರೇನೊ?' ಎಂದು ಕೇಳಿದರು. ಗೌಸ್ ನಗುತ್ತಾ, 'ಸಾರ್, ನಾನು ನೋಡಲು ಹೋಗಿದ್ದು, ಕಲ್ಯಾಣ್ ಕುಮಾರ್ ಅಭಿನಯದ ಸಿನಿಮಾ 'ತಾಯಿತಂದೆ' ಎಂದಾಗ ನಮ್ಮ ಪ್ರಾಂಶುಪಾಲರು ಸುಸ್ತೋ ಸುಸ್ತು!

**ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ**



ಚಿತ್ರಗಳು: ಗಣೇಶ ಆಚಾರ್ಯ